ಕಣೋ. ಈಗ ನಾನು ಬಂದಿದ್ದೀನಲ್ಲ... ಬಿಟ್ಹಾಕು' ಸಿಡುಕಿದೆ. ಗೊಳ್ ಅಂತ ನಕ್ಕುಬಿಟ್ಟ. 'ಯಾಕೋ?' ತಬ್ಬಿಬ್ಬಾಗಿ ನೋಡಿದೆ.

'ಬಂದಿದ್ದೀಯಾ. ಮತ್ತೆ ವಿಮಾನದಲ್ಲಿ ಹಾರಿಹೋಗ್ತಿಯಾ ಅಷ್ಟೆ' ನಿಸ್ಸಾರ ನಗೆ ಅವನ ತುಟಿಗಳಲ್ಲೇ ಮೂಡಿತೋ ನನಗೇ ಹಾಗನ್ನಿಸಿತೋ.

'ಇಲ್ಲಪ್ಪ... ಇನ್ನು ಮೇಲೆ ಇಲ್ಲೇ ಇರ್ತೀನಿ ಆಯ್ತಾ' ಪಿಸುಗಿದೆ. 'ಇರ್ತೀವಿ ಅನ್ನು. ನಿನ್ನ ಎಂಜಿನಿಯರ್ ಗಂಡ ವಿದೇಶದಲ್ಲಿ ದಂಡಿಗಟ್ಟಲೆ ದುಡಿದಿರ್ತಾನೆ. ಇಲ್ಲಿಯೇ ಏನಾದರೂ ಫ್ಯಾಕ್ಟರಿ ಹಾಕ್ತಾನೋ ಹೆಂಗೆ?'

'ಇಲ್ಲಪ್ಪ. ಅವರಲ್ಲೇ... ನಾನಿಲ್ಲೇ' ವಿಷಾದವನ್ನು ಮರೆಮಾಚಿ ನಗುತ್ತಾ ಟೇಬಲ್ ಮೇಲೆ ತಾಳ ಹಾಕಿದೆ. ಹಾಡು ಗುನುಗಿದೆ.

'ಏನೇ ಹಾಗಂದ್ರೆ! ಈ ಸಂಭ್ರಮಕ್ಕೆ ಅವನನ್ನೇ ಮದುವೆಯಾಗಬೇಕಿತ್ತೆ? ಅದೇನು ಬಿಡಿಸಿ ಹೇಳಬಾರದ್ದೆ' ಅವನು ದುಗುಡಗೊಂಡಿದ್ದ. 'ಹೇಳಬೇಕು ಅನ್ನಿಸಿದರೆ ಹೇಳು. ಕಾಂಪ್ಲಿಕೇಟೆಡ್ ಇದ್ದರೆ ಬೇಡ' ಅಂತಲೂ ಸೇರಿಸಿದ. ಮನಸ್ಸೋ ತೂಗುಯ್ಯಾಲೆ. ಅವನಲ್ಲಿನ ತಾರುಣ್ಯದ ಹುಮ್ಮಸ್ಸು, ನನ್ನ ಕುರಿತು ಈಗಲೂ ಅವನಿಗಿರುವ ಫ್ಯಾಶನ್ ನೋಡುವಾಗ ಹೇಳಿಕೊಳ್ಳಬೇಕೆನ್ನಿಸಿತು.

'ಕಾಂಪ್ಲಿಕೇಟೆಡ್ಡೋ ಕಾಂಟ್ರ್ಯೂಬ್ಯೂಟೆಡ್ಡೋ ನಾನು ಹೇಗೆ ಸ್ವೀಕರಿಸ್ತೀನಿ ಅನ್ನೋದರ್ಮೇಲೆ ಡಿಪೆಂಡ್ ಕಣೋ' ಎಂದು ಒಂದು ನಿಮಿಷ ಪಾಸ್ ಕೊಟ್ಟೆ. ಅವನ ಕನ್‌ಸರ್ನ್ ನೋಡಿ ಎಲ್ಲವನ್ನೂ ಬಿಚ್ಚಿಡಬೇಕೆನ್ನಿಸಿತು. 'ಮುಚ್ಚಿಡುವಂತದ್ದೇನಿಲ್ಲಪ್ಪ. ಮದುವೆಯಾಗಿ ಆರು ವರ್ಷಗಳಾಗೋಯ್ತಲ್ಲ. ನನಗೆ ಮಕ್ಕಳೇ ಆಗಲಿಲ್ಲ. ಅದೇ ನೆಪವಾಗಿ ಜಗಳ ಮನಸ್ತಾಪ ನಮ್ಮಲ್ಲಿ ಹೆಚ್ಚಾಯ್ತು. ಆತನಿಗೆ ಹೊರಗಿನ ಸಂಬಂಧಗಳೂ ಇದ್ದವು. ಆ ಮನುಷ್ಯ ನನ್ನನ್ನು ತೀರಾ ಕಡೆಗಾಣಿಸಿದ. ಈ ರೀತಿ ದ್ವೇಷಿಸುತ್ತಾ ಒಟ್ಟಿಗೆ ಒಂದು ಸೂರಿನಡಿ ಬದುಕುವ ಬದಲು ಬೇರೆಯಾಗೋಣ ಅಂದೆ. ತಕ್ಷಣ ಡಿವೋರ್ಸ್‌ಗೆ ಒಪ್ಪಿದ. ಜೀವನಾಂಶವೂ ಕೊಟ್ಟು ಕೈತೊಳೆದುಕೊಂಡ. ತವರಿಗೆ ಬಂದು ಆರು ತಿಂಗಳಾಯಿತು. ತಂದೆ ಜೊತೆ ನೆಮ್ಮದಿಯಾಗಿದ್ದೇನೆ' ನಿಟ್ಟುಸಿರು ಬಿಡುವ ಜಾಗದಲ್ಲಿ ನನ್ನಲ್ಲಿ ನಗು ನುಸುಳಿದಾಗ ಅವನ ಸಾನಿಧ್ಯದ ಪ್ರಭಾವವಿರಬಹುದೆ ಎಂಬ ಗುಮಾನಿ ನನ್ನನ್ನು ಆವರಿಸಿತು. ದೊಡ್ಡದಾಗಿ ನಿಟ್ಟುಸಿರು ಬಿಟ್ಟಿದ್ದು ಅವನು. 'ನೀನು ತುಂಬಾ ಖುಷಿಯಾಗಿದ್ದೀಯಾ. ನನ್ನನ್ನು ಮರೆತೇಬಿಟ್ಟಿರ್ತಿಯಾ ಅನ್ಕೊಂಡಿದ್ದೆ ಕಣೆ. ಇದೇನೆ ಇದು ಎಲ್ಲಾ ಉಲ್ಟಾಪಲ್ಟಾ!' ಬೆರಗಾಗಿದ್ದ.

'ಜೀವನ ಹೀಗೆ ಕಣೋ. ಪ್ರೀತಿಸೋರ್ನ ದೂರ ಮಾಡ್ಕೋತೀವಿ. ಹತ್ತಿರವಾದೋರ್ನ ಪ್ರೀತಿಸೋಣ ಅಂದ್ರೆ ಅವರಿಗೆ ಬೇಕಿರೋದು ಚೆಂದವಾದ ದೇಹ. ದೇಹ ಹಳೆಯದಾಯ್ತು. ಗಂಡಹೆಂಡಿರ ನಡುವೆ ಕೊಂಡಿಯಾಗಬೇಕಾದ ಮಕ್ಕಳೂ ಇಲ್ಲ. ಮೋರ್ ಓವರ್ ತಾಯಿಯಾಗದ ಹೆಣ್ಣು ಹಲವರ ದೃಷ್ಟಿಯಲ್ಲಿ ಹೆಣ್ಣೇ ಅಲ್ಲ ಅನ್ನಿಸಿಬಿಡ್ತಾಳೆ. ಹೀಗೆ ಏನೇನೋ ಪ್ರಾಬ್ಲಮ್ಮು...'

'ನಿನ್ನ ಗಂಡನೂ ಟೆಸ್ಟ್ ಮಾಡಿಸಿಕೊಂಡ್ನಾ?'

'ಗೊತ್ತಿಲ್ಲಪ್ಪ. ನಾನವನಿಗೆ ಬೇಕಿರಲಿಲ್ಲ ಅಷ್ಟೆ.'

ಬೇರರ್ ಕಾಫಿ ತಂದಿಟ್ಟ. ನಿಧಾನವಾಗಿ ಹೀರಲಾರಂಭಿಸಿದೆ. ಮನಸ್ಸಾಗಲೇ ಮಂಡಿಗೆ ತಿನ್ನಲಾರಂಭಿಸಿತ್ತು. ಸ್ವಾರ್ಥಿ ಅಂತಲೂ ಗೋಣಗಿತು. ಅವನು ನನ್ನ ಕೈನಲ್ಲಿನ ಕನ್ನಡಿಯ ಹಾಗೆ. ಅವನಲ್ಲಿಯೇ ನನ್ನನ್ನು ನಾನು ನೋಡಿಕೊಳ್ಳುತ್ತಿದ್ದ ದಿನಗಳೂ ನೆನಪಾದವು. ಅಷ್ಟೊಂದು ಪ್ರೀತಿಸುತ್ತಿದ್ದವನನ್ನು ದೂರ ಮಾಡಿಕೊಳ್ಳಲು ನನಗೆ ನನ್ನದೇ ಕಾರಣಗಳಿದ್ದವು. ಆಗಲೂ ಅವನ ಪ್ರಾಮಾಣಿಕತೆಯ ಬಗ್ಗೆ ಎಳ್ಳಷ್ಟೂ ಸಂಶಯವಿರಲಿಲ್ಲ. ಪ್ರೀತಿಯೊಂದೇ ಹೊಟ್ಟೆ ತುಂಬಿಸೋಲ್ಲವಲ್ಲ.